# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಎಂವೈಎಸ್/1697-2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 19/01/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

ವಿಷಯ: **ಶ್ರೀ ಹೆಚ್.ಸಿ.ಮಲ್ಲರಾಜು, ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಡ್ಯ ವಿಭಾಗ,** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

---

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಮಂಡ್ಯ, ಮಂಡ್ಯ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಹೆಚ್.ಸಿ.ಮಲ್ಲರಾಜು, ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಡ್ಯ ವಿಭಾಗ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಬಿ.ಡಿ.ಕೃಷ್ಣ, ಲೇಟ್ ಹೆಚ್.ದಾಸೇಗೌಡ, ಬೆಳಗೊಳ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಮಾಹಿತಿ :-**

i) ದೂರುದಾರರು ತನ್ನ ದೂರಿನಲ್ಲಿ, ತಮ್ಮ ಬಾಬ್ತು ಕಟ್ಟಡವನ್ನು (ಖಾತಾ ನಂಬರ್ 436) ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ರವರಿಗೆ 2016-17 ನೇ ಸಾಲಿಗೆ ವಸತಿ ಶಾಲೆ ನಡೆಸಲು ಮಾಸಿಕ ಬಾಡಿಗೆ ರೂ.40,000-00 ಗಳಂತೆ ಬಾಡಿಗೆಗೆ ನೀಡಿದ್ದು, ಸದರಿ ಕಟ್ಟಡದಲ್ಲಿ 2017-18 ನೇ ಸಾಲಿಗೆ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ, ಬೆಳಗೊಳ ಗ್ರಾಮ ಇದನ್ನು ಮುಂದುವರಿಸುವ ಬಗ್ಗೆ ಪ್ರಾಂಶುಪಾಲರು, ಕಿತ್ತೂರು ರಾಣಿ ವಸತಿ ಶಾಲೆ, ಬೆಳಗೊಳ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ರವರು ತಮ್ಮ ಕಛೇರಿ ಪತ್ರ

ಸಂಖ್ಯೆ: ಕಿ.ರಾ.ಚೆ.ವ.ಶಾ.ಬೆ.ಬಾ.ಕ(3):01/2017-18 ದಿನಾಂಕ: 25-04-2017 ರಲ್ಲಿ ಕಾರ್ಯಪಾಲಕ ಅಭಿಯಂತರು, ಪಿಬ್ಲ್ಯೂಡಿ, ಮಂಡ್ಯ ರವರಿಗೆ ಸದರಿ ಬಾಡಿಗೆ ಕಟ್ಟಡಕ್ಕೆ ಅಲಭ್ಯತಾ ದೃಢೀಕರಣ ಪತ್ರ ನೀಡಿ, ಬಾಡಿಗೆ ನಿಗದಿಪಡಿಸಲು ಪ್ರಸ್ತಾವನೆ ಸಲ್ಲಿಸಿದ್ದು, ದೂರುದಾರರು ಪ್ರಾಂಶುಪಾಲರನ್ನು ಕಟ್ಟಡದ ಬಾಡಿಗೆ ಬಗ್ಗೆ ವಿಚಾರ ಮಾಡಿದಾಗ, ಸದರಿ ವಿಷಯವನ್ನು ಪ್ರಾಂಶುಪಾಲರು ತಿಳಿಸಿದ್ದು, ನಂತರ, ದೂರುದಾರರು ಈ ಬಗ್ಗೆ ದಿನಾಂಕ: 20-07-2017 ರಂದು ತನ್ನ ಮೊಬೈಲ್ ನಂಬರ್ 9538279252 ರಿಂದ ಎದುರುದಾರವರ ಮೊಬೈಲ್ ನಂಬರ್ 7892922973 ಕ್ಕೆ ಸಂಜೆ ಸುಮಾರು 4-30 ಗಂಟೆ ಸಮಯದಲ್ಲಿ ಕರೆ ಮಾಡಿ ವಿಚಾರ ಮಾಡಿದಾಗ, ದೂರುದಾರರ ಕಟ್ಟಡಕ್ಕೆ ಅಲಭ್ಯತಾ ದೃಢೀಕರಣ ಪತ್ರ ನೀಡಿ ಬಾಡಿಗೆ ನಿಗದಿಪಡಿಸಲು ರೂ.10,000/- ಗಳ ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ. ಆದರೆ, ದೂರುದಾರರಿಗೆ ಲಂಚ ನೀಡಿ ಕಟ್ಟಡಕ್ಕೆ ಅಲಭ್ಯತಾ ದೃಢೀಕರಣ ಪತ್ರ ಪಡೆಯಲು ಇಷ್ಟವಿಲ್ಲದಿದ್ದರಿಂದ, ದಿನಾಂಕ: 24-07-2017 ರಂದು ಪೊಲೀಸ್ ಉಪಾಧೀಕ್ಷಕರು, ಎಸಿಬಿ, ಮಂಡ್ಯ ಇವರಿಗೆ ದೂರು ನೀಡಿರುತ್ತಾರೆ. ಈ ಸಂಬಂಧವಾಗಿ ಮೊ.ಸಂಖ್ಯೆ: 07/2017 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7 ಅಡಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ.

ii). ದಿನಾಂಕ: 24-07-2017 ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀ ಟಿ. ಕೃಷ್ಣ ಪಂಚ-1, ಶ್ರೀ ಹೆಚ್.ವಿ.ಪುಟ್ಟಸ್ವಾಮಯ್ಯ ಪಂಚ-2, ಇವರನ್ನು ಬರಮಾಡಿಕೊಂಡು, ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 10,000/- (ಹಣದ ಡಿನಾಮಿನೇಷನ್ 2000/- x 5) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇದ್ದ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಪಂಚ-1 ರವರು ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪಂಚ-2 ರವರು ಅದನ್ನು ಹಾಳೆಯಲ್ಲಿ ದಾಖಲಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ-1 ರವರು, ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಲೀನ್ ಪೌಡರ್ ಲೇಪಿಸಿದ 10,000/- ರೂ.ಗಳ ಹಣವನ್ನು ಎಣಿಸಿ, ದೂರುದಾರರ ಧರಿಸಿದ್ದ ಶರ್ಟಿನ ಎಡಬಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಬಲಗೈಯಿಂದ ತಲೆ ಸವರಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿ ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ಕೊಟ್ಟು ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿಕೊಟ್ಟಿರುತ್ತಾರೆ ಮತ್ತು ಪಂಚ-2 ಶ್ರೀ ಹೆಚ್.ವಿ.ಪುಟ್ಟಸ್ವಾಮಯ್ಯ ಇವರು ದೂರುದಾರರ ಜೊತೆಗೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ದಿನಾಂಕ: 24-07-2017ರಂದು ಪಂಚರ ಸಮಕ್ಷಮ 11.00 ರಿಂದ ಮಧ್ಯಾಹ್ನ 1.00 ಘಂಟೆಯವರೆಗೆ ಬರೆದಿರುತ್ತಾರೆ.

iii). ನಂತರ ಅದೇ ದಿನ, ದಿನಾಂಕ: 24-07-2017 ರಂದು ತನಿಖಾಧಿಕಾರಿ, ಸ್ಟಿಬ್ಬಂದಿ, ದೂರುದಾರರು, ಮತ್ತು ಪಂಚರು ಇವರುಗಳು ಎದುರುದಾರರು ಕರ್ತವ್ಯ ನಿರ್ವಹಿಸುವ ಪಿಡಬ್ಲ್ಯೂಡಿ ಕಚೇರಿಯ ಹತ್ತಿರ ಬಂದಿರುತ್ತಾರೆ. ನಂತರ ದೂರುದಾರರು ಶ್ರೀ ಹೆಚ್.ವಿ.ಪುಟ್ಟಸ್ವಾಮಯ್ಯ ರವರ ಜೊತೆಗೆ ಎದುರುದಾರರ ಕಚೇರಿಗೆ ಬಂದು ಸಿಬ್ಬಂದಿಯನ್ನು ಕೇಳಿದಾಗ, ಎದುರುದಾರರು ಮೈಸೂರಿಗೆ ಮೀಟಿಂಗ್ ಸಂಬಂಧ ಹೋಗಿರುತ್ತಾರೆಂದು ತಿಳಿಸಿರುತ್ತಾರೆ. ನಂತರ ದೂರುದಾರರು ಎದುರುದಾರರನ್ನು ಅವರು ಮೀಟಿಂಗ್ ಮುಗಿಸಿ ವಾಪಸ್ ಬರುವವರೆಗೂ ಕಛೇರಿ ಬಳಿ ಕಾಯ್ದು, ಅವರು ಬಂದ ನಂತರ, ದೂರುದಾರರು ಎದುರುದಾರರ ಹತ್ತಿರ ಹೋಗಿ, ತಮ್ಮ ಕೆಲಸದ ಬಗ್ಗೆ ವಿಚಾರ ಮಾಡಿದಾಗ, ಎದುರುದಾರರು ನಮ್ಮ ಸಾಹೇಬರು ರಿಲೀವ್ ಆಗಿದ್ದಾರೆ. ಹೊಸಬರು ಬಂದ ನಂತರ ಮಾಡಿಸಿಕೊಡುವುದಾಗಿ ತಿಳಿಸಿ, ಹಣವನ್ನು ಈಗಲೇ ಕೊಟ್ಟು ಹೋಗುವಂತೆ ತಿಳಿಸಿದ ಮೇರೆಗೆ, ದೂರುದಾರರು ತಮ್ಮ ಬಳಿ ಇದ್ದ ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಎದುರುದಾರರಿಗೆ ನೀಡಿದ್ದು, ಅವರು ಹಣವನ್ನು ಬಲಗೈಯಿಂದ ಪಡೆದು, ಎರಡೂ ಕೈಗಳಿಂದ ಎಣಿಸಿ, ತಾವು ಕುಳಿತಿದ್ದ ಟೇಬಲ್ ಮೇಲಿದ್ದ ರೈಟಿಂಗ್ ಪ್ಯಾಡಿನ ಕೆಳಭಾಗದಲ್ಲಿ ಇಟ್ಟು ಕೊಂಡಿರುತ್ತಾರೆ. ಆಗ ದೂರುದಾರರು ತನಿಖಾಧಿಕಾರಿಗೆ ನಿಗದಿ ಸೂಚನೆಯನ್ನು ಸಂಜೆ 04.30ರ ವೇಳೆಯಲ್ಲಿ ನೀಡಿರುತ್ತಾರೆ.

iv). ನಂತರ, ತನಿಖಾಧಿಕಾರಿಯವರು ಸ್ಥಳಕ್ಕೆ ಬಂದಾಗ, ದೂರುದಾರರು ಎದುರುದಾರರನ್ನು ತೋರಿಸಿ ಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರನ್ನು ಪರಿಚಯಿಸಿಕೊಂಡು, ಅವರ ವಿರುದ್ಧ ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ತನಿಖೆಯನ್ನು ಪ್ರಾರಂಭಿಸಿ, ಎದುರುದಾರರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣ ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ತನಿಖಾಧಿಕಾರಿಯವರು ಎದುರುದಾರರನ್ನು ಲಂಚದ ಹಣದ ಬಗ್ಗೆ ವಿಚಾರಿಸಿ ಹಾಜರುಪಡಿಸುವಂತೆ ತಿಳಿಸಿದಾಗ, ಎದುರುದಾರರು ರೈಟಿಂಗ್ ಪ್ಯಾಡ್ ಕೆಳಭಾಗದಲ್ಲಿದ್ದ ಹಣವನ್ನು ಹಾಜರುಪಡಿಸಿದ್ದು, ಅದನ್ನು ಪಂಚ-2 ರವರು ಪ್ರಾಯೋಗಿಕ ಪಂಚನಾಮೆಯ ವೇಳೆಯಲ್ಲಿ ಬರೆದ ಮೌಲ್ಯ ಮತ್ತು ನಂಬರಿಗೆ ತಾಳೆ ಮಾಡಿ, ಖಾತ್ರಿಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರು ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ಶುದ್ಧ ಹತ್ತಿ ತುಂಡಿನಿಂದ ಟೇಬಲ್ ಮೇಲಿದ್ದ ರೈಟಿಂಗ್ ಪ್ಯಾಡ್ ಕೆಳಭಾಗವನ್ನು ಒರೆಸಿ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ.

v). ನಂತರ, ತನಿಖಾಧಿಕಾರಿಯವರು ಎದುರುದಾರರನ್ನು ವಿಚಾರಿಸಿದಾಗ, ಅವರು ತನ್ನ ಸಮಜಾಯಿಷಿಯನ್ನು "ಸದರಿಯವರ ಕಡತ ಸಂಬಂಧ ಈಗಾಗಲೇ ಪತ್ರ ವ್ಯವಹಾರ ನಡೆಸಿದ್ದು, ಬಾಡಿಗೆ ದರವನ್ನು ನಿಗದಿಪಡಿಸಿ ಕಳುಹಿಸಿಕೊಟ್ಟಿದ್ದು, ಬಾಡಿಗೆ ನಿಗದಿಪಡಿಸುವವರೆಗೆ ಮಾತ್ರ ಕಡತ ನನ್ನಲ್ಲಿ ಇರುತ್ತದೆ. ಕಡತ ನವೀಕರಣ ಸಂಬಂಧ ಕಟ್ಟಡದ ಮಾಲೀಕರಾದ ಶ್ರೀ ಕೃಷ್ಣ ರವರು ದೂರವಾಣಿ

ಮುಖಾಂತರ ಕರೆಮಾಡಿ ನನ್ನ ನವೀಕರಣವನ್ನು ನಿಗದಿಪಡಿಸುವಂತೆ ಕೋರಿದರು. ಸದರಿಯವರಿಗೆ ನಿಮ್ಮ ಕಡತ ನನ್ನ ಬಳಿ ಇರುವುದಿಲ್ಲ. ಇದು ನವೀಕರಣ ಸಂಬಂಧ ನಮ್ಮ ವಿಭಾಗದ ಶ್ರೀಮತಿ ಇಂದ್ರಾಣಿ ರವರ ಬಳಿ ಇರುತ್ತದೆ . ಅವರನ್ನು ಸಂಪರ್ಕಿಸಿ ಎಂದು ತಿಳಿಸಿದಾಗ ಅವರು ನನಗೆ ಗೊತ್ತಿಲ್ಲಾ ನೀವೇ ಮಾಡಿಸಿಕೊಡಿ ಎಂದು ಬಲವಂತಪಡಿಸಿ ತಗೊಳ್ಳಿ ಬೇಕಾದರೇ ಈ ಹಣವನ್ನು ನೀವೇ ಇಟ್ಟುಕೊಳ್ಳಿ ಸಾರ್ ಎಂದು ಬಲವಂತ ಮಾಡಿ ನನ್ನ ಕೈಗೆ ಹಣ ಹಾಕಿದರು. ಅವರ ಕಡತವನ್ನು ಪಡೆದು ಸಂಬಂಧಪಟ್ಟವರಿಗೆ ವಹಿಸುವ ಮೊದಲೇ ಇವರು ಈ ಕೃತ್ಯವನ್ನು ಮಾಡಿರುತ್ತಾರೆ. ನನಗೆ ತುಂಬಾ ಬಲವಂತ ಮಾಡಿದ್ದರಿಂದ ಈ ಕಡತವನ್ನು ಪಡೆದಿರುತ್ತೇನೆ. ಆದರೇ ಇದು ನನಗೆ ಸಂಬಂಧಪಟ್ಟಿರುವುದಿಲ್ಲ ನಾನು ನಿರ್ದೋಷಿಯಾಗಿರುತ್ತೇನೆಂದು ಇತ್ಯಾದಿ ಬರೆದುಕೊಟ್ಟಿರುತ್ತಾರೆ". ಎಂಬುದಾಗಿ ಲಿಖಿತ ಸಮಜಾಯಿಷಿ ನೀಡಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ, ದಿನಾಂಕ: 24-07-2017 ರಂದು 04.45 ರಿಂದ ಸಂಜೆ 06.45 ರವರೆಗೆ ಎದುರುದಾರರ ಕಛೇರಿಯಲ್ಲಿ ಜಪ್ತಿ ಪಂಚನಾಮೆಯನ್ನು ಜರುಗಿಸಿರುತ್ತಾರೆ.

vi). ನಂತರ ತನಿಖಾಧಿಕಾರಿಯವರು, ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆ ಇದ್ದ ಸಿಡಿಯನ್ನು ಲ್ಯಾಪ್‌ಟ್ಯಾಪ್‌ಗೆ ಹಾಕಿ ಧ್ವನಿ ಸುರುಳಿಯನ್ನು ಎದುರುದಾರರ ಇಲಾಖೆಯ 1ನೇ ಉಪವಿಭಾಗದ ಅಧಿಕಾರಿ ಶ್ರೀ ಹರ್ಷ, ಎಇಇ ಮತ್ತು ಶ್ರೀ ಶಂಕರ, ಲೆಕ್ಕ ಅಧೀಕ್ಷಕರು ಇವರಿಗೆ ಕೇಳಿಸಿದಾಗ ಸದರಿ ಸಂಭಾಷಣೆಯ ಧ್ವನಿಯನ್ನು ಅವರು ಕೇಳಿದ್ದು ಧ್ವನಿಗಳ ಪೈಕಿ ತಮ್ಮ ಇಲಾಖೆಯ ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ.

vii). ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಸಂಬಂಧವಾಗಿ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತಾರೆ.

ix). ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

x). ಎದುರುದಾರರಿಗೆ ದಿ: 13/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 12/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿವರಣೆಯಲ್ಲಿ ದೂರುದಾರರು 2016-17ನೇ ಸಾಲಿಗೆ ಫೇರ್ ರೆಂಟ್ (ಮಾಸಿಕ ಬಾಡಿಗೆ ನಿಗದಿಪಡಿಸಲು) ಅರ್ಜಿ ಸಲ್ಲಿಸಿದ್ದು, ಸದರಿ ಕಟ್ಟಡವನ್ನು ದೂರುದಾರರು ಲೀಸ್

ಆಧಾರದ ಮೇಲೆ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ, ಬೆಳಗೊಳ ಗ್ರಾಮಕ್ಕೆ ನೀಡಿರುವುದನ್ನು ಒಪ್ಪಿಕೊಂಡಿರುತ್ತಾರೆ. ಸದರಿ ಅರ್ಜಿಯ ಮೇಲೆ ತಾನು ಮಾಸಿಕ ಬಾಡಿಗೆ 40,000/– ರೂ.ಗಳಿಗೆ ಶಿಫಾರಸ್ಸು ಮಾಡಿರುವುದಾಗಿ ಹಾಗೂ ಅದು 2019 ರವರೆಗೆ ಊರ್ಜಿತವಿರುತ್ತದೆ ಎಂದು ಹೇಳಿರುತ್ತಾರೆ. ಹಾಗಾಗಿ ದಿ: 24–04–2017 ರಂದು ಮತ್ತೊಂದು ಅರ್ಜಿಯ ಸಲ್ಲಿಸಲು ಕಾರಣವಿರುವುದಿಲ್ಲ ಎಂದು ಹೇಳಿರುತ್ತಾರೆ. ಸದರಿ ಅರ್ಜಿಯ ವಿಚಾರವಾಗಿ ದೂರುದಾರರು ಎದುರುದಾರರಿಗೆ 10,000/– ರೂ.ಗಳನ್ನು ಕೊಡುವುದಾಗಿ ಹೇಳಿದ್ದು, ಹಾಗೂ ದೂರುದಾರರು ತನ್ನ ಅರ್ಜಿಯನ್ನು ಪ್ರೋಸೆಸ್ ಮಾಡಲು ಕೋರಿದಾಗ, ಎದುರುದಾರರು ಕಾನೂನು ಬದ್ದವಿಲ್ಲದ ಅರ್ಜಿಯನ್ನು ತಿರಸ್ಕರಿಸುವುದಾಗಿ ಹೇಳಿರುತ್ತಾರೆ. ಈ ಕಾರಣದಿಂದ ಅಸಮಾಧಾನಗೊಂಡ ದೂರುದಾರರು ತನ್ನ ವಿರುದ್ಧ ಸುಳ್ಳು ಅರ್ಜಿಯನ್ನು ದಾಖಲಿಸಿ, ಅದರಲ್ಲಿ ತಾನು 10,000/– ರೂ. ಹಣವನ್ನು ಒತ್ತಾಯ ಮಾಡಿರುವುದಾಗಿ ತಿಳಿಸಿರುತ್ತಾರೆ. ದಿ: 24–7–2017 ರಂದು ತನ್ನಗೆ ಲಂಚದ ಹಣವನ್ನು ತರುವಂತೆ ದೂರುದಾರರಿಗೆ ತಿಳಿಸಿರುವುದಿಲ್ಲವೆಂದು ಹಾಗೂ ಸದರಿ ದಿನಾಂಕದಂದು ದೂರುದಾರರೆ ತನ್ನ ಮುಂದೆ ಬಂದು 10,000/– ಹಣವನ್ನು ಯಾವುದೇ ಸೂಚನೆ ಇಲ್ಲದೆ ತನ್ನ ರೈಟಿಂಗ್ ಪ್ಯಾಡ್ ಕೆಳಭಾಗದಲ್ಲಿ ಇಟ್ಟಿರುತ್ತಾರೆ. ತನಿಖಾಧಿಕಾರಿ ಹೇಳಿದ ಮೇರೆಗೆ ಎದುರುದಾರರು ತನ್ನ ರೈಟಿಂಗ್ ಪ್ಯಾಡ್ ಕೆಳಭಾಗದಲ್ಲಿದ್ದ ಇದ್ದ ಹಣವನ್ನು ತೆಗೆದು ಎಣಿಸಿ ರುವುದಾಗಿ ಹೇಳಿರುತ್ತಾರೆ. ಎ.ಸಿ.ಬಿ. ಯವರ ಸೂಚನೆ ಮೇರೆಗೆ ತಾನು ಹೇಳಿಕೆಯನ್ನು ಸಹ ನೀಡಿರುವುದಾಗಿ ಹೇಳಿರುತ್ತಾರೆ. ತನ್ನ ಇಲಾಖೆಯವರು ದೂರುದಾರರ ದಿ: 24/4/2017ರ ಅರ್ಜಿಯ ವಾಸ್ತವ ಅಂಶವನ್ನು ತಿಳಿಯದೆ, ತನಗೆ ವಹಿಸಿರುತ್ತಾರೆ. ತನ್ನ ಕರ್ತವ್ಯದ ಅವಧಿಯಲ್ಲಿ ತಾನು ಯಾವುದೇ ಲಂಚಕ್ಕೆ ಬೇಡಿಕೆ ಇಟ್ಟಿರುವುದಿಲ್ಲ. ಎ.ಸಿ.ಬಿ ಪೋಲೀಸರು ತನ್ನ ವಿರುದ್ಧ ಪಿಸಿ ಕಾಯ್ದೆ 1988 ಕಲಂ 7 13(1)(ಡಿ) ಸ/ವಾ 13(2) ಅಡಿಯಲ್ಲಿ ದಾಖಲಿಸಿರುವ ಪ್ರಕರಣ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ, ಮಂಡ್ಯ ಇಲ್ಲಿ ವಿಶೇಷ ಪ್ರಕರಣ ಸಂಖ್ಯೆ: 356/2018 ರಲ್ಲಿ ವಿಚಾರಣೆ ಇರುತ್ತದೆ ಎಂದು ತಿಳಿಸಿರುತ್ತಾರೆ. ದೂರುದಾರರು ಮಂಡ್ಯ ಕಾರ್ಯಪಾಲಕ ಅಭಿಯಂತರರಿಗೆ ಮಾಸಿಕ ಬಾಡಿಗೆ ನಿಗದಿ ಪಡಿಸುವಂತೆ ಅರ್ಜಿ ನೀಡಿರುತ್ತಾರೆ. ಸದರಿ ಅರ್ಜಿಯ ಮೇಲೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಶ್ರೀರಂಗಪಟ್ಟಣ ಇವರು ತನ್ನ ಪತ್ರದಲ್ಲಿ ಬಾಡಿಗೆಯನ್ನು ಮರುನಿಗದಿಪಡಿಸಲು ಆಗುವುದಿಲ್ಲದ ಕಾರಣ ಈಗಾಗಲೇ 2019–20ನೇ ಸಾಲಿಗೆ ಮಾಸಿಕ ಬಾಡಿಗೆ ನಿಗದಿಯಾಗಿರುತ್ತದೆಂದು ಹೇಳಿರುತ್ತಾರೆ. ಮೇಲ್ಕಂಡ ಕಾರಣಗಳಿಗಾಗಿ ದೂರುದಾರರ ಕೆಲಸ ಎದುರುದಾರರ ಬಳಿ ಬಾಕಿ ಇರಲಿಲ್ಲ ಮತ್ತು ಎದುರುದಾರರು ಯಾವುದೇ ಲಂಚ ಬೇಡಿಕೆ ಇಟ್ಟಿರುವುದಿಲ್ಲ. ಹಾಗೂ ದೂರುದಾರರು ಸುಳ್ಳು ಆರೋಪವನ್ನು ಎದುರುದಾರರ ವಿರುದ್ಧ ಮಾಡಿರುತ್ತಾರೆ. ತಾನು ಯಾವುದೇ ಕರ್ತವ್ಯ ಲೋಪ ಮಾಡಿರುವುದಿಲ್ಲ. ಹಾಗಾಗಿ ತನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡುವಂತೆ ಕೋರಿರುತ್ತಾರೆ. ಎದುರುದಾರರು ನೀಡಿರುವ ಪ್ರತ್ಯುತ್ತರವನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ. ಎದುರುದಾರರನ್ನು ವಿಚಾರಣೆ ಮಾಡದೇ ಇರಲು ಸೂಕ್ತ ಕಾರಣಗಳು ಕಂಡು

ಬಂದಿರುವುದಿಲ್ಲ, ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

3. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

4. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮವಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

5. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

24/1/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು